ಅಧ್ಯಕ್ಷರು : ಅವರು ರೆವಿನ್ಯೂ ಮಂತ್ರಿ ಎಂದು ಹೇಳಲಿಲ್ಲ. ಸಾಮಾನ್ಯವಾಗಿ ಮಂತ್ರಿಗಳು ಬಂದಾಗ ಮಾತ್ರ ಎಂದು ಹೇಳಿದರು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಸಾಮಾನ್ಯವಾಗಿ ಮಂತ್ರಿಗಳು ಬಂದಾಗ ಅಂದರೆ ಅದೇನೋ ನನಗೆ ಗೊತ್ತಿಲ್ಲ. ಆದರೆ ನಾನು ಅಲ್ಲಿಗೆ ಹೋದಾಗ ಮಾತ್ರ ಆ ಅಧಿಕಾರಿಗಳಿಗೆ ನೀವು ಬಂದು ನನಗೆ ಊಟ-ತಿಂಡಿ ವ್ಯವಸ್ಥೆ ಮಾಡಿ ಎಂದೂ ಯಾವತ್ತೂ ಕೇಳಿಲ್ಲ ಮತ್ತು ಹೇಳಿಯೂ ಇಲ್ಲ. ಆ ರೀತಿ ಹೇಳುವುದೂ ಸರಿಯಲ್ಲ. ಆದರೆ ಅವರು ಇದರಿಂದಲೇ ಜಾಸ್ತಿಯಾಗಿದೆ ಕೆಲಸ ಎಂದು ಏನು ಹೇಳುತ್ತಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಏಕೆಂದರೆ ಇಲ್ಲಿಯವರೆವಿಗೂ ಯಾರೂ ಕೂಡ ನಮಗೆ ಕೆಲಸ ಜಾಸ್ತಿಯಾಗಿದೆಯೆಂದು ಮತ್ತು ಅದನ್ನು ಕಡಿಮೆ ಮಾಡಿಯೆಂದು ಹೇಳಿಲ್ಲ. ಒಂದು ವೇಳೆ ನನ್ನ ಗಮನಕ್ಕೆ ಬಂದು ಕೆಲಸ ಜಾಸ್ತಿಯಾಗಿದೆಯೆನ್ನುವ ಅಂಶ ಕಂಡು ಬಂದರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಜಯನಗರ ಕ್ಷೇತ್ರದಲ್ಲಿನ ಕೊಳಚೆ ಪ್ರದೇಶಗಳು.

575 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಜಯನಗರ ವಿಧಾನಸಭಾ ಕ್ಷೇತ್ರಗಳಲ್ಲಿರುವ ಕೊಳಚೆ ಪ್ರದೇಶಗಳೆಷ್ಟು ?

ಆ) ಇವುಗಳ ಪೈಕಿ ಎಷ್ಟು ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಇದುವರೆಗೆ ಹಕ್ಕುಪತ್ರಗಳನ್ನು ನೀಡಲಾಗಿದೆ ?

ಇ) ಇನ್ನುಳಿದ ನಿವಾಸಿಗಳಿಗೆ ಯಾವಾಗ ಹಕ್ಕು ಪತ್ರಗಳನ್ನು ವಿತರಿಸಲಾಗುವುದು ?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಬೆಂಗಳೂರು ನಗರದ ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 46 ಕೊಳಚೆ ಪ್ರದೇಶಗಳ ಪೈಕಿ ಘೋಷಿತಗೊಂಡ ಕೊಳಚೆ ಪ್ರದೇಶಗಳು 21. ಗುರ್ತಿಸಲ್ಪಟ್ಟವು (ಘೋಷಣೆಯಾಗದಿರುವ) ಕೊಳಚೆ ಪ್ರದೇಶಗಳು 25.

ಆ) ಘೋಷಿತಗೊಂಡ 21 ಕೊಳಚೆ ಪ್ರದೇಶಗಳ ಪೈಕಿ ತಾವರೆಕೆರೆ ಸರ್ವೆ ನಂಬರ್ 5 ಹಾಗೂ ಸರ್ವೆ ನಂ. 7 ರಲ್ಲಿ ಅನುಕ್ರಮವಾಗಿ 172 ಹಾಗೂ 129 ಮನೆಗಳನ್ನು ನಿರ್ಮಿಸಿದ್ದು, ಫಲಾನುಭವಿಗಳಿಗೆ ಹಂಚಿಕೆ ಮಾಡಿ ಹಕ್ಕುಪತ್ರಗಳನ್ನು ನೀಡಲಾಗಿದೆ. ಸೋಮೇಶ್ವರ ನಗರದ ಕೊಳಚೆ ನಿವಾಸಿಗಳಿಗೆ ಹುಡ್ಕೋ ಸಂಸ್ಥೆಯ ಸಾಲದ ನೆರವಿನಿಂದ 100 ಮನೆಗಳನ್ನು ಕಟ್ಟುವ ಕಾಮಗಾರಿಗೆ ಮಂಜೂರಾತಿ ದೊರೆತ್ತಿದ್ದು, 56 ಮನೆಗಳ ನಿರ್ಮಾಣದ ಕಾಮಗಾರಿಯು ವಿದ್ಯುತ್ ಸಂಪರ್ಕವನ್ನು ಹೊರತುಪಡಿಸಿ ಪೂರ್ಣಗೊಂಡಿರುತ್ತದೆ. ಈ ನಿವಾಸಿಗಳು ಮಂಡಳಿಗೆ ಪ್ರಾರಂಭಿಕ ಠೇವಣಿ ಮತ್ತು ನೋಂದಣಿ ಶುಲ್ಕ ಪಾವತಿಸಿದ ನಂತರ ಮನೆಗಳನ್ನು ಹಂಚಿಕೆ ಮಾಡಿ ಹಕ್ಕು ಪತ್ರಗಳನ್ನು ವಿತರಿಸಲಾಗುವುದು. ಉಳಿದ ಘೋಷಿತ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಗುರುತು ಪತ್ರಗಳನ್ನು ನೀಡಲಾಗಿದೆ.

ಇ) ಮುಂಬರುವ ವರ್ಷಗಳಲ್ಲಿ ಹಣದ ಲಭ್ಯತೆ ಹಾಗೂ ಸ್ಥಳದ ಲಭ್ಯತೆ ಆಧಾರದ ಮೇಲೆ ವಸತಿ ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸಿದಲ್ಲಿ ಮನೆಗಳನ್ನು ನಿರ್ಮಿಸಿ ಹಕ್ಕು ಪತ್ರಗಳನ್ನು ನೀಡಲಾಗುವುದು.

ಶ್ರೀ ರಾಮಲಿಂಗರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಮೊದಲನೆಯ ಪ್ರಶ್ನೆಗೆ46 ಕೊಳಚೆ ಪ್ರದೇಶಗಳ ಪೈಕಿ 21 ಘೋಷಿತಗೊಂಡ ಕೊಳಚೆ ಪ್ರದೇಶ 21 ಎಂದು ತಿಳಿಸಿ ಇನ್ನು 25 ನೋಟಿಪೈ ಆಗಿಲ್ಲವೆಂದಿದ್ದಾರೆ. ಎರಡನೆಯ ಪ್ರಶ್ನೆಯಲ್ಲಿ ಎಷ್ಟು ಸ್ಲಮ್ಸ್‌ಗೆ ಹಕ್ಕುಪತ್ರಗಳನ್ನು ಕೊಟ್ಟಿದ್ದೀರಿ ಎಂದು ಕೇಳಿರುವುದಕ್ಕೆ ಸೋಮೇಶ್ವರ ಸ್ಲಮ್ಸ್‌ಗೆ ಕೊಟ್ಟಿದ್ದಾರೆ, ಇಲ್ಲಿ ನಾಲ್ಕು ವರ್ಷಗಳ ಹಿಂದೆಯೇ ಇಲ್ಲಿ ವಾಸಿಸುವವರಿಗೆ ನಿಮಗೆ ಬೇರೆ ಮನೆಗಳನ್ನು ಕಟ್ಟಿಕೊಡುತ್ತೇವೆಂದು ತಿಳಿವಳಿಕೆ ಹೇಳಿ ಅವರನ್ನು ಫುಟ್‌ಪಾತ್ ಮೇಲೆ, ಅಲ್ಲಿ ಇಲ್ಲಿ ಗುಡಿಸಲು ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ನಾಲ್ಕು ವರ್ಷಗಳಿಂದಲೂ ಇನ್ನೂ ಆ 55 ಮನೆಗಳು ಪೂರ್ಣಗೊಂಡಿಲ್ಲ. ಅವರ ವರದಿ ಪ್ರಕಾರವೇ ವಿದ್ಯುತ್ ಕೆಲಸ ಬಿಟ್ಟು ಮಿಕ್ಕಿದ ಕೆಲಸ ಆಗಿದೆಯೆಂದು ಹೇಳಿದ್ದಾರೆ. ನಾಲ್ಕು ವರ್ಷಗಳಾದರೂ ಇನ್ನು ಮಿಕ್ಕ 45 ಮನೆಗಳು ಇನ್ನೂ ಕೂಡ ಕಟ್ಟುವುದಕ್ಕೆ ಪ್ರಾರಂಭವಾಗಿಯೇ ಇಲ್ಲ. ಆಗಲೇ ಅಲ್ಲಿರುವವರಿಗೆ ನಾವು ಕನ್‌ವಿನ್ಸ್ ಮಾಡಿ ನೀವು ಬೇರೆ ಕಡೆ ಇರಿ, ನಿಮಗೆ ಇನ್ನು6 ತಿಂಗಳು ಅಥವಾ ಒಂದು ವರ್ಷದಲ್ಲಿ ಬೇರೆ ಮನೆ ಕಟ್ಟಿಕೊಡುತ್ತೇವೆಂದು ಹೇಳಲಾಗಿತ್ತು. ಇನ್ನೂ ಕೂಡ ಆ ಕೊಳಚೆ ಪ್ರದೇಶದಲ್ಲಿ ನಿಮ್ಮ ಪ್ರಕಾರವೇ 55 ಮನೆಗಳು ಅಪೂರ್ಣಗೊಂಡಿವೆ ಮತ್ತು 45 ಮನೆಗಳನ್ನು ಕಟ್ಟುವ ಕೆಲಸವೇ ಇನ್ನೂ ಕೂಡ ಪ್ರಾರಂಭವಾಗಿಲ್ಲ. ಇನ್ನು ಮೂರನೆಯ ಪ್ರಶ್ನೆಯಲ್ಲಿ ಇನ್ನು ಉಳಿದಿರತಕ್ಕಂಥ 8 ಕೊಳಚೆ ಪ್ರದೇಶಗಳಿಗೆ ಯಾವಾಗ ಹಕ್ಕುಪತ್ರ ಕೊಡುತ್ತೀರಿ ಎಂದು ಕೇಳಿರುವುದಕ್ಕೆ ಅದಕ್ಕೆ ಸ್ಪಷ್ಟವಾದ ಉತ್ತರ ಬಂದಿಲ್ಲ. ಈಗ ಮಹಾಲಿಂಗೇಶ್ವರ ಸ್ಲಮ್ ಆಡುಗೋಡಿ, ಅಲ್ಲಿ ಸುಮಾರು600 ರಿಂದ 700 ಮನೆಗಳು ಇವೆ. ಅಲ್ಲಿ ಇನ್ನು 50 ರಿಂದ 60ಕ್ಕೆ ಹಕ್ಕುಪತ್ರ ಕೊಡಬೇಕು, ಮಿಕ್ಕದಕ್ಕೆಲ್ಲಾ ಹಿಂದೆಯೇ ಹಕ್ಕುಪತ್ರ ಕೊಡಿಸಿಬಿಟ್ಟಿದ್ದೇವೆ. ಅದೇ ರೀತಿ ಇನ್ನೊಂದು ಸ್ಲಮ್‌ನಲ್ಲಿ ಸುಮಾರು 500 ರಿಂದ 1000 ಕೊಳಚೆ ಪ್ರದೇಶದ ಗುಡಿಸಲುಗಳಿವೆ. ಅಲ್ಲೂ ಕೂಡ ಸುಮಾರು ಶೇ. 90 ರಷ್ಟು ಮನೆಗಳಿಗೆ ಹಕ್ಕುಪತ್ರವನ್ನು ಕೊಟ್ಟುಬಿಟ್ಟಿದ್ದೇವೆ. ಇನ್ನು ಉಳಿಕೆ ಶೇಕಡ 5 ರಿಂದ 10 ಭಾಗದ ಮನೆಗಳಿಗೆ ಮಾತ್ರ ಹಕ್ಕುಪತ್ರ ಕೊಡಬೇಕು. ಅದೇ ರೀತಿ ಹೊಂಬೇಗೌಡ ಸ್ಲಮ್, ನೆಕ್ಕಿಲ್‌ಬಂಡೆ ಸ್ಲಮ್, ಕೆ.ಆರ್ ಸ್ಲಮ್, ತಾವರೆಕೆರೆ ಸ್ಲಮ್, ಹೀಗೆ ಎಲ್ಲಾ ಕಡೆಯಲ್ಲಿಯೂ ಹಕ್ಕು ಪತ್ರಗಳನ್ನು ಕೊಟ್ಟಿದ್ದೇವೆ, ಆದರೆ ಶೇಕಡ 5 ರಿಂದ 10 ಪರ್ಸೆಂಟ್ ಮನೆಗಳವರಿಗೆ ಹಕ್ಕುಪತ್ರ ಕೊಟ್ಟಿಲ್ಲವಷ್ಟೆ. ಇದಕ್ಕೆ ನೀವು ಹಣವನ್ನೇನೂ ಖರ್ಚು ಮಾಡಬೇಕಾಗಿಲ್ಲ. ನೀವು ಉತ್ತರದಲ್ಲಿ ಏನು ಹೇಳಿದ್ದೀರೆಂದರೆ, ಮುಂಬರುವ ಹಣದ ಲಭ್ಯತೆ ಹಾಗೂ ಸ್ಥಳದ ಲಭ್ಯತೆ ಆಧಾರದ ಮೇಲೆ ಎಂದು ಹೇಳಿದ್ದೀರಿ. ನಾವು ಹಾಲಿ ಇರತಕ್ಕಂಥ ಸ್ಲಮ್‌ಗಳಿಗೆ ಹಕ್ಕುಪತ್ರ ಕೇಳುತ್ತಿರುವುದು. ಇದಕ್ಕೆ ಹಣ ಮತ್ತು ಜಾಗ ಬೇಕಾಗಿಲ್ಲ. ಯಾವಾಗ ಹಕ್ಕುಪತ್ರ ಇಂಥವುಗಳಿಗೆ ಕೊಡುತ್ತೀರಿ ಎಂದು ಕೇಳಿರುವುದು.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಭೂ ಜಲ ಅಭಿವೃದ್ಧಿ ಸಚಿವರು) ವಸತಿ ಸಚಿವರ ಪರವಾಗಿ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಕೇಳಿದ ಹಾಗೆ ನಾವು ಸ್ಲಮ್‌ನಲ್ಲಿ ಮೊದಲೇ

ಹಕ್ಕುಪತ್ರ ಕೊಡುವುದಿಲ್ಲ. ನಾವು ಸ್ಲಮ್ ಎಂದು ಗುರುತಿಸಿದ ಮೇಲೆ ಆ ಸ್ಲಮ್‌ನಲ್ಲಿರತಕ್ಕಂಥವರಿಗೆ ಮೊದಲು ಗುರುತಿನ ಚೀಟಿಯನ್ನು ಕೊಡುತ್ತೇವೆ. ಗುರುತಿನ ಚೀಟಿಯನ್ನು ಕೊಟ್ಟಾದ ಮೇಲೆ ಅವರು ಮನೆಕಟ್ಟಿದ ಮೇಲೆ ಮನೆ ಹಕ್ಕುಪತ್ರವನ್ನು ಅವರಿಗೆ ಕೊಡುತ್ತಿದ್ದೇವೆ. ಆದುದರಿಂದ ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಈಗಾಗಲೇ 21 ಸ್ಲಮ್‌ಗಳವರನ್ನು ಗುರುತಿಸಿದ್ದೇವೆ. ಮತ್ತು ಅವರಿಗೆ ಈಗಾಗಲೇ ಗುರುತಿನ ಚೀಟಿಯನ್ನು ಕೊಟ್ಟಿದ್ದೇವೆ. ಈಗ ಇನ್ನೂ 25 ಸ್ಲಮ್‌ಗಳವರನ್ನು ಗುರುತಿಸಬೇಕಾಗಿದೆ, ಅದು ಸ್ವಲ್ಪ ತಡವಾಗಿದೆ, ಅದನ್ನು ಮಾಡಿಸುವುದಕ್ಕೆ ನಮ್ಮ ಅಧಿಕಾರಿಗಳಿಗೆ ನಾನು ಆದೇಶ ಕೊಡುತ್ತೇನೆ, ಈಗ 56 ಮನೆಗಳು ಪೂರ್ಣಗೊಂಡಿವೆ, ಅವುಗಳಿಗೆ ವಿದ್ಯುತ್ ಸರಬರಾಜನ್ನು ಮಾತ್ರ ಕೊಡಬೇಕಾಗಿದೆ, ಅದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ವಿದ್ಯುತ್ ಸರಬರಾಜು ಕೊಟ್ಟಾದ ಮೇಲೆ ಉಳಿದಂಥ 45ಕ್ಕೆ ಏನಾಗಿದೆಯೆಂದರೆ, ಅಲ್ಲಿ ಆ ಮನೆಗಳಿಲ್ಲಾ ಹೋದಮೇಲೆ ಖಾಲಿ ಜಾಗಕ್ಕೆ ಅವರನ್ನು ಕಳುಹಿಸಿ ಅವರು ಅಲ್ಲಿ ಮೊದಲು ಇದ್ದಂಥ ಜಾಗದಲ್ಲಿ ಆದಷ್ಟು ಬೇಗ ಮನೆಗಳನ್ನು ಕಟ್ಟುವ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಆದಷ್ಟು ಜಾಗ್ರತೆ ಇದರ ಬಗ್ಗೆ ವ್ಯವಸ್ಥೆ ಮಾಡುತ್ತೇನೆಂದು ಸನ್ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ರಾಮಲಿಂಗರೆಡ್ಡಿ : ಅವುಗಳು ಈಗಾಗಲೇ ನೋಟಿಫೈಡ್ ಸ್ಲಮ್ಸ್.

ಅಧ್ಯಕ್ಷರು : ನೀವು ಹೇಳಿದ್ದುದು ನನಗೆ ಅರ್ಥವಾಗಿದೆ, ಫೈನಾನ್ಸಿಷಿಯಲ್ ಇಂಪ್ಲಿಕೇಶನ್ಸ್ ಏನೂ ಇಲ್ಲ, ಜಾಗ ಕೂಡ ಇದೆ, ಜನರೂ ಇದ್ದಾರೆ, ಆದಕಾರಣ ಹಕ್ಕುಪತ್ರ ಕೊಟ್ಟುಬಿಡಲಿ ಎಂದಿದ್ದೀರಿ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಸದಸ್ಯರು ಹೇಳಿರುವುದನ್ನು ಮಾಡುವುದಕ್ಕೆ ಹಣದ ಲಭ್ಯತೆ ನೋಡಿಕೊಂಡು ಮಾಡಬೇಕಾಗುತ್ತದೆ.

ಅಧ್ಯಕ್ಷರು : ಅವರು ಏನು ಹೇಳಿದ್ದಾರೆಂದರೆ, ಇದಕ್ಕೆ ಹಣದ ಅವಶ್ಯಕತೆಯಿಲ್ಲ. ಅವರು ಈಗಾಗಲೇ ಅಲ್ಲಿದ್ದಾರೆ, ಸ್ಲಮ್ ನೋಟಿಫೈಡ್ ಆಗಿದೆ, ಅವರಿಗೆ ಹಕ್ಕುಪತ್ರ ಕೊಡಿ ಎಂದಿದ್ದಾರೆ. ಆದುದರಿಂದ ನೀವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ.

ಶ್ರೀ ತಿಪ್ಪೇಸ್ವಾಮಿ : ಆಯಿತು.

ಸುರತ್ಕಲ್ ಕ್ಷೇತ್ರದಲ್ಲಿ ಪ್ರವಾಹದಿಂದ ತೊಂದರೆಗೊಳಗಾದ ಗ್ರಾಮಗಳು

576 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿನಲ್ಲಿ ಸುರತ್ಕಲ್ ಕ್ಷೇತ್ರದಲ್ಲಿ ನೆರೆ ಹಾವಳಿಗೊಳಗಾದ ಗ್ರಾಮಗಳೆಷ್ಟು? (ವಿವರ ನೀಡುವುದು)*

ಆ) *ಸದರಿ ಗ್ರಾಮಗಳಲ್ಲಿ ಮನೆ ಕುಸಿತ ಬೆಳೆ ಹಾನಿ ಹಾಗೂ ಪ್ರಾಣ ಹಾನಿ ಎಷ್ಟು?*